ಉ) ಮಾರ್ಚ್ 2006ರ ಅಂತ್ಯಕ್ಕೆ ರಾಜ್ಯ ಸರ್ಕಾರದಿಂದ ರೂ. 3.01 ಕೋಟಿ ತಾಲ್ಲೂಕು ಪಂಚಾಯ್ತಿಗಳಿಂದ ರೂ. 0.97 ಕೋಟಿ

ಒಟ್ಟು 3.98 ಕೋಟಿ

ಊ) ರೂ. 39.47 ಕೋಟಿಗಳು

ಋ) ನಿಗಮವು ಸಾರ್ವಜನಿಕ ಶಿಕ್ಷಣ ಇಲಾಖೆಗೆ ರಾಜ್ಯವಲಯದಲ್ಲೇ ಬಾಕಿ ಹಣವನ್ನು ಪಾವತಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದೆ. ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಎ) ಹೌದು.

ಏ) ಅನ್ವಯಿಸುವುದಿಲ್ಲ.

706(1112) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅತೀ ಗಣ್ಯರ ನಗರದ ಭೇಟಿ ಸಂದರ್ಭದಲ್ಲಿ ಸುಲಲಿತ ಸಂಚಾರಕ್ಕಾಗಿ ವಿಧಾನ ಸೌಧ, ಅಥವಾ ವಿಕಾಸ ಸೌಧದ ಸಮೀಪ ಹೆಲಿಪ್ಯಾಡ್ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಗುರುತಿಸಲಾಗಿದೆ. ಮತ್ತು ಯೋಜನೆಯ ಒಟ್ಟು ವೆಚ್ಚ ಎಷ್ಟು?

ಇ) ಇಲ್ಲದಿದ್ದಲ್ಲಿ ಅತೀ ಗಣ್ಯರ ನಗರದ ಭೇಟಿ ಸಂದರ್ಭದಲ್ಲಿನ ಸಂಚಾರ ನಿಯಂತ್ರಣಕ್ಕೆ ಸರ್ಕಾರ ಪರ್ಯಾಯ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಈ ಉದ್ದೇಶಕ್ಕೆ ಅರಮನೆ ಮೈದಾನವನ್ನು ಗುರುತಿಸಿದೆ. ಯೋಜನೆಯ ಖರ್ಚು ವೆಚ್ಚಗಳ ವಿವರಗಳು ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

707(1144) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೂಸೂರು ರಸ್ತೆಯ ಮಾರಾಟ ತೆರಿಗೆ ತಪಾಸಣಾ ಠಾಣೆಯ ಬಳಿ ವಾಹನಗಳ ದಟ್ಟಣೆ ಅತಿಯಾಗಿರುವುದು ಹಾಗೂ ಲಾರಿ ಮತ್ತು ಬಸ್ ಚಾಲಕರುಗಳು ವಾಹನ ಪ್ರವೇಶ ನಿಷಿದ್ಧ ಮಾಡಿರುವ ರಸ್ತೆಯಲ್ಲಿ ವಾಹನ ಚಲಿಸಿ ನಿಯಮ ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?